ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ:080-22343904/05

ಕಾಲೇಜು ಶಿಕ್ಷಣ ಆಯುಕ್ತರಕಛೇರಿ
ಅರಮನೆರಸ್ತೆ, ಬೆಂಗಳೂರು-560001.

ಸಂಖ್ಯೆ:ಕಾಶಿಇ/ಶೈವಿ/67/ಶು.ವಿ/ಸುತ್ತೋಲೆ/2018-19

ದಿನಾಂಕ:07.03.2019

# ಸುತ್ತೋಲೆ

ವಿಷಯ: ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ 67 ಹೆಚ್‌ಪಿಯು 2018 ದಿನಾಂಕ:15.12.2018.
2) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/ಶೈವಿ/67/ಶುಲ್ಕವಿನಾಯಿತಿ/2018-19 ದಿನಾಂಕ:23.02.2019.

* * * * * * * *

2018-19 ನೇ ಸಾಲಿನಲ್ಲಿ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕ ವಿನಾಯಿತಿ ನೀಡುವ ಸಂಬಂಧ ಲೆಕ್ಕ ಶೀರ್ಷಿಕೆ 2202-03-107-1-14-106 ರಡಿ ಅನುದಾನವನ್ನು ಒದಗಿಸಲಾಗಿದ್ದು. ಅದ್ದರಂತೆ ಉಲ್ಲೇಖ (2) ರಲ್ಲಿನ ಈ ಕಛೇರಿ ಆದೇಶದಲ್ಲಿ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಕಾಲೇಜುವಾರು ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಕೆ-2 ಮೂಲಕ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಸದರಿ ಅನುದಾನದಿಂದ ಶುಲ್ಕ ಮರುಪಾವತಿಯ ಮೊತ್ತವನ್ನು ವಿದ್ಯಾರ್ಥಿನಿಯರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲು ಸೂಚಿಸಲಾಗಿದೆ.

- ಪರಿಶಿಷ್ಟ ಜಾತಿ/ಪರಿಶಿಷ್ಠ ಪಂಗಡ ವಿದ್ಯಾರ್ಥಿನಿಯರಿಗೆ ಸಂಬಂಧಿಸಿದ ಪ್ರಾದಿಕಾರದಿಂದ ಶುಲ್ಕ ವಿನಾಯಿತಿ /ಮರುಪಾವತಿ ಸೌಲಭ್ಯ ಪಡೆದಿರುವವರು ಈ ಸೌಲಭ್ಯಕೆ ಅರ್ಹರಿರುವುದಿಲ್ಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದೆ ಇರುವವರು ಹಾಗೂ ಅರ್ಜಿ ಸಲ್ಲಿಸಿ ವಿದ್ಯಾರ್ಥಿ ವೇತನ ಮಂಜೂರಾಗದೆ ಇರುವವರಿಗೆ ಈ ಅನುದಾನದಿಂದ ಶುಲ್ಕ ಮರು ಪಾವತಿ ಮಾಡಬಹುದು.
- ಪರಿಶಿಷ್ಟ ಜಾತಿ/ಪರಿಶಿಷ್ಠ ಪಂಗಡ/ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರಿಗೆ ಸಂಬಂಧಿಸಿದ ಪ್ರಾಧಿಕಾರದಿಂದ ಶುಲ್ಕ ವಿನಾಯಿತಿ ಪಡೆದಿದ್ದು ಸದರಿ ಶುಲ್ಕ ಮರುಪಾವತಿ ಮೊತ್ತ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿನಿಯರಿಗೆ ವ್ಯತ್ಯಾಸದ (ಹೆಚ್ಚುವರಿ ಶುಲ್ಕ ಕಟ್ಟಿದ್ದಲ್ಲಿ) ಶುಲ್ಕವನ್ನು ಈ ಅನುದಾನದಿಂದ ಮರುಪಾವತಿ ನೀಡಬಹುದು.
- ಲೆಕ್ಕ ಶೀರ್ಷಿಕೆ 2202-03-107-1-14-106 ರಡಿ ಕೆ-2 ನಲ್ಲಿ ಬಿಲ್ ತಯಾರಿಸಲು ಈ ಕೆಳಕಂಡಂತೆ ಕ್ರಮ ವಹಿಸುವುದು.

| BILL TYPE | CLIME TYPE |
|---|---|
| Grant in-Aid | Grant in-Aid(General) |

- ಬಿಲ್ ನಮೂನೆ; CTS-13.

7/3/19
ಕಾಲೇಜು ಶಿಕ್ಷಣನಿರ್ದೇಶಕರು

**ಇವರಿಗೆ;**

1. ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು;**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ,ಬೆಂಗಳೂರು,ಮೈಸೂರು, ಮಂಗಳೂರು, ಶಿವಮೊಗ್ಗ,ಧಾರವಾಡ, ಕಲ್ಬುರ್ಗಿ.
2. ಮಾಹಿತಿತಂತ್ರಜ್ಞಾನ ಅಧಿಕಾರಿಗಳು, ಕೇಂದ್ರಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.